ಯಾರು ಬೇಕಾದರೂ ಶ್ರದ್ಧಾವಂತರಾಗಬಹುದು. ಆದರೆ ಅದಕ್ಕೆ ದೃಢಸಂಕಲ್ಪ ಬೇಕಾಗುತ್ತದೆ. ಸಂಕಲ್ಪಸಿದ್ಧಿಯಾಗದ ಹೊರತು, ಶ್ರದ್ಧೆಯ ಅಂಕುರವಾಗುವುದು ಕಷ್ಟ. ಸಂಕಲ್ಪಸಿದ್ಧಿಗೆ ಮೂಲವಾದದ್ದು ಮನಸ್ಸೇ ಆದಕಾರಣ, ಮನಸ್ಸಿನ ದುರ್ಬಲತೆಯನ್ನು ಮೊದಲು ನಿವಾರಿಸಿಕೊಳ್ಳಬೇಕು. ಎಲ್ಲ ಮಹಾಸಾಧಕರಲ್ಲಿಯೂ ನಾವು ಕಾಣುವುದು ಇದನ್ನೇ. ಮಹಾಭಾರತದ ವೀರಾಧಿವೀರರೆಲ್ಲ, ಶೂರಾಧಿಶೂರರೆಲ್ಲ ಇಂತಹ ಶ್ರದ್ಧೆ ಹಾಗೂ ಸಂಕಲ್ಪ ಸಿದ್ಧಿಯಿಂದಲೇ ಬಿಲ್ವಿದ್ಯೆಯಲ್ಲಿ ಅಗಾಧವಾದುದನ್ನು ಸಾಧಿಸಿದರು. ಋಷಿಮುನಿಗಳೆಲ್ಲರೂ ದೈವತ್ವಕ್ಕೇರಿ ಕೀರ್ತಿವಂತರಾದದ್ದೂ ಇಂತಹ ಸಂಕಲ್ಪಸಿದ್ಧಿಯಿಂದಲೇ.

ಶ್ರದ್ಧೆ ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುವ ಒಂದು ಪ್ರಬಲ ಶಕ್ತಿ. ಅವನ ಗೆಲುವಿಗೆ, ನಲಿವಿಗೆ ಆಧಾರವಾಗಬಲ್ಲ ಒಂದು ಪ್ರಬಲ ಅಸ್ತ್ರ. ವಿಚಿತ್ರವೆಂದರೆ, ಅದು ಎಲ್ಲರಲ್ಲಿಯೂ ಅಡಗಿದ್ದರೂ, ಅದನ್ನು ಕಂಡುಕೊಳ್ಳುವ ಗೋಜಿಗೆ ವ್ಯಕ್ತಿ ಹೋಗದಿರುವುದು, ಅದನ್ನೊಂದು ಶಕ್ತಿ ಎಂದು ಅರಿತುಕೊಳ್ಳದೆ ಸೋಲನ್ನು ಅನುಭವಿಸುತ್ತಿರುವುದು. ಒಬ್ಬ ವಿದ್ಯಾರ್ಥಿ ಒಂದು ಸಾರಿ ಪರೀಕ್ಷೆಯಲ್ಲಿ ಸೋಲನ್ನು ಅನುಭವಿಸಿದ ಮೇಲೆ, ತನ್ನ ತಪ್ಪಿನ ಅರಿವಾಗಿ, ಶ್ರದ್ಧೆಯಿಂದ ಓದಿ, ಮುಂದಿನ ಸಲ ಉತ್ತಮ ದರ್ಜೆಯಲ್ಲಿ ಪಾಸಾದಾಗ, ಅದು ಶ್ರದ್ಧೆಯ ಪ್ರತಿಫಲ ಎಂದು ಅವನಿಗೆ ಅನಿಸದಿರದು.

ಎಷ್ಟೋ ಬಾರಿ ನಾವು ನಮ್ಮಲ್ಲಿರುವ ಶಕ್ತಿಯನ್ನು ತಿಳಿಯದೆ ಹೋಗುತ್ತೇವೆ. ಮತ್ತೆಲ್ಲಿಯೋ ನಮ್ಮ ಸೋಲಿನ ತಪ್ಪನ್ನು ಅಥವಾ ಕಾರಣವನ್ನು ಹುಡುಕಲು ಪ್ರಯತ್ನಿಸುತ್ತೇವೆ. ಇದಕ್ಕಿಂತ ವಿಪರ್ಯಾಸ ಮತ್ತೊಂದಿಲ್ಲ ಅನ್ನಿಸುತ್ತದೆ. ಅದಕ್ಕೆ ಸ್ವಾಮಿ ವಿವೇಕಾನಂದರು ಒಂದೆಡೆ ಹೀಗೆ ಹೇಳುತ್ತಾರೆ: "ಓ ನನ್ನ ವೀರಬಾಲಕರೇ, ನೀವು ಮಹಾನ್ ಕಾರ್ಯಗಳನ್ನು ಮಾಡಲು ಜನ್ಮವೆತ್ತಿದ್ದೀರೆಂಬ ಶ್ರದ್ಧೆಯನ್ನು ತಾಳಿ, ಕುನ್ನಿಗಳ ಬೊಗಳುವಿಕೆ ನಿಮ್ಮನ್ನು ಹೆದರಿಸದಿರಲಿ, ಸಿಡಿಲು ಗುಡುಗುಗಳ ಆರ್ಭಟ ಕೂಡ ನಿಮ್ಮನ್ನು ಬೆದರಿಸದಿರಲಿ."

ಮಾಡುವ ಕೆಲಸದಲ್ಲಿ ಶ್ರದ್ಧೆಯೊಂದಿದ್ದರೆ ಅದಕ್ಕಿಂತ ದೊಡ್ಡ ಅಸ್ತ್ರ ಮತ್ತೊಂದಿಲ್ಲ. ಆತ್ಮವಿಶ್ವಾಸದ ಪ್ರತೀಕ ಶ್ರದ್ಧೆ, ಜೀವನೋತ್ಸಾಹದ ಮೂಲವೂ ಶ್ರದ್ಧೆಯೇ. ಜೀವನೋತ್ಸಾಹವನ್ನು ಹೊಂದಿರದ ವ್ಯಕ್ತಿ, ಏನನ್ನಾದರೂ ಸಾಧಿಸಬೇಕೆಂಬ ಛಲವಿರದ ವ್ಯಕ್ತಿ, ಶ್ರದ್ಧಾವಂತನಾಗಿರಲು ಎಂದಿಗೂ ಸಾಧ್ಯವಿಲ್ಲ.

**ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ**
**ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ**

ಬಸವಣ್ಣನವರ ಈ ಮಾತು ಗಮನೀಯ. ಒಬ್ಬ ನಿಜವಾದ ಭಕ್ತನೆನಿಸಬೇಕಾದರೆ ಇವೆಲ್ಲವೂ ಬೇಕಾಗುತ್ತದೆ. ಕೇವಲ ಲಾಂಛನಗಳನ್ನು ಧರಿಸುವುದರ ಮೂಲಕ ಯಾರೊಬ್ಬರೂ ಭಕ್ತರೆನಿಸಲು ಸಾಧ್ಯವಿಲ್ಲ. ಅದಕ್ಕೆ ಆತ್ಮವ್ಯವಸಾಯ ಮುಖ್ಯ.

'ನನಗೇನು ಗೊತ್ತಿಲ್ಲ', 'ನಾನು ಏನೂ ಅಲ್ಲ' ಎಂದು ಹೇಳಿಕೊಳ್ಳುವುದು ಆತ್ಮವಂಚನೆ; ಅತಿವಿನಯದ ಲಕ್ಷಣ. 'ಕೊಟ್ಟ ಕುದುರೆಯನೇರಲರಿಯದವನ' ಮಾತು. ಆದ್ದರಿಂದ ಸ್ವಾಮಿ ವಿವೇಕಾನಂದರು ಹೇಳುವ ಹಾಗೆ, "ಎಲ್ಲವೂ ನನ್ನಲ್ಲಿಯೇ ಇದೆ. ಅದನ್ನು ಇಚ್ಛಾನುಸಾರ ನಾನು ಪ್ರಕಟಗೊಳಿಸಬಲ್ಲೆ" ಎಂಬ ಆತ್ಮಶಕ್ತಿಯನ್ನು, ಇಚ್ಛಾಶಕ್ತಿಯನ್ನು ಬೆಳೆಸಿಕೊಳ್ಳುವುದು ಒಳ್ಳೆಯದು. "ನಿರಾಶಾದಾಯಕ ಚಿಂತನೆಗಳನ್ನು ಬೆಳೆಸಿಕೊಂಡು ತೊಳಲಾಡುವವರನ್ನು ಕಂಡಾಗ ನನಗೆ ತಲೆಯ ಮೇಲೆ ಸಿಡಿಲು ಬಡಿದಂತಾಗುತ್ತದೆ" ಎಂದು ಅವರು ಒಂದು ಕಡೆ ಹೇಳುತ್ತಾರೆ.

ನಂಬಿಕೆ ಜೀವನದ ಮತ್ತೊಂದು ರಹಸ್ಯ. ನಂಬಿಕೆಯೇ ಜೀವನ ಎಂಬ ಮಾತೂ ಇದೆ. ನಂಬಿಕೆ ಹುಟ್ಟುವುದು ಶ್ರದ್ಧೆಯಿಂದ, ಆತ್ಮವಿಶ್ವಾಸದಿಂದ. ತನ್ನಲ್ಲಿ ತಾನು ನಂಬಿಕೆಯನ್ನು ಕಳೆದುಕೊಂಡ ವ್ಯಕ್ತಿ ಏನನ್ನೂ ಸಾಧಿಸಲಾರ. ದೇವರನ್ನು ನಂಬಿದರಷ್ಟೇ ಸಾಲದು. ಅದರ ಹಿಂದೆ ನಿಜವಾದ ಶ್ರದ್ಧೆ, ಭಕ್ತಿ, ಪವಿತ್ರತೆ – ಇವೆಲ್ಲವೂ ಬೇಕಾಗುತ್ತದೆ. ಕೃತಕ ಭಕ್ತಿಗೆ ದೇವರು ಎಂದೂ ಫಲ ನೀಡುವುದಿಲ್ಲ. ಜೀವನದಲ್ಲಿ ಗೆಲ್ಲಬೇಕಾದರೂ ಹಾಗೆಯೇ. ಒಬ್ಬ ವಿದ್ಯಾರ್ಥಿಯ ಜೀವನದಲ್ಲಿಯೂ ಅಷ್ಟೇ. ಕಾಟಾಚಾರಕ್ಕೆ ಪುಸ್ತಕ ಹಿಡಿದು ಕುಳಿತ ವಿದ್ಯಾರ್ಥಿಗೆ ಓದು ಎಂದೂ ಕರಗತವಾಗಲಾರದು. ಅದರ ಹಿಂದೆ ಅಗಾಧವಾದ ಶ್ರದ್ಧೆ, ಪ್ರಾಮಾಣಿಕತೆ, ಗುರಿ ಇರಬೇಕಾಗುತ್ತದೆ.

ಜೀವನದಲ್ಲಿ ವ್ಯಕ್ತಿಯ ಸೋಲಿಗೆ ಹಲವು ಕಾರಣಗಳಿರುತ್ತವೆ. ಆದರೆ, ಗೆಲುವಿಗೆ ಮಾತ್ರ ಒಂದೇ ಕಾರಣ – ಅದು ಶ್ರದ್ಧೆ. ಜೀವನದಲ್ಲಿ ಶ್ರದ್ಧೆ ಎಲ್ಲವನ್ನೂ ತಂದುಕೊಡುತ್ತದೆ. ಅವನಲ್ಲಿ ಅದು ಒಂದು ಶಕ್ತಿಯಾಗಿ ಪರಿಣಮಿಸಿ ಸೋಲಿಲ್ಲದ ಸರದಾರನನ್ನಾಗಿ ಮಾಡುತ್ತದೆ. **ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕಾದರೆ ಅದಕ್ಕಿರುವುದು ಒಂದೇ ಮಾರ್ಗ – ಶ್ರದ್ಧೆಯಿಂದ ಕೂಡಿದ ಓದು.** ಅದು ನಿಜವಾದ ಶಕ್ತಿಯಾಗಿ ಪರಿಣಮಿಸಿದಾಗ ಗೆಲುವು ನಿಶ್ಚಿತ. ಸ್ವಾಮಿ ವಿವೇಕಾನಂದರು ಹೇಳುವ, "ಪ್ರಪಂಚವೆನ್ನುವುದು ದೊಡ್ಡ ವ್ಯಾಯಾಮಶಾಲೆ, ನಮ್ಮನ್ನು ನಾವು ಶಕ್ತಿಶಾಲಿಗಳನ್ನಾಗಿ ಮಾಡಿಕೊಳ್ಳಲು ಇಲ್ಲಿಗೆ ಬಂದಿದ್ದೇವೆ" ಎಂಬ ಮಾತು ಬಹಳ ಅರ್ಥಪೂರ್ಣವಾದುದು. ಅದಕ್ಕೆ ಬೇಕಾದಷ್ಟು ಶ್ರಮ, ಶ್ರದ್ಧೆ, ಪರಿಶುದ್ಧ ಮನಸ್ಸು, ದೃಢಸಂಕಲ್ಪ, ನಿಶ್ಚಿತಗುರಿ – ಇವುಗಳೊಂದಿಗೆ ಜೀವನ ವ್ಯಾಯಾಮಶಾಲೆಯನ್ನು ಪ್ರವೇಶಿಸಿದರೆ ಮಾನಸಿಕವಾಗಿ ಶಕ್ತಿಶಾಲಿಯಾಗಿ, ಬೌದ್ಧಿಕವಾಗಿ ದೃಢಕಾಯರಾಗಿ ಹೊರಹೊಮ್ಮಲು ಸಾಧ್ಯ.

ಸ್ವಾಮಿ ವಿವೇಕಾನಂದರ ವಾಣಿ ಇಂದು ಎಲ್ಲರಿಗೂ ದಾರಿದೀಪವಾಗಬೇಕಾಗಿದೆ. ಅವರ ವಾಣಿ ಎಲ್ಲರ ಕಿವಿ ಹೊಕ್ಕು, ಎಲ್ಲರ ಮನಸ್ಸನ್ನೂ ಪ್ರಬಲಗೊಳಿಸಬೇಕಾಗಿದೆ. ಜನರ ಸಂಕುಚಿತತೆಯನ್ನೂ, ಹೇಡಿತನವನ್ನೂ ಇಲ್ಲವಾಗಿಸಬೇಕಾಗಿದೆ. ಅದು ಸಿಂಹವಾಣಿ. ಆ ಘರ್ಜನೆಯ ಮೂಲಕ ಎಲ್ಲರೂ ಎಚ್ಚರಗೊಳ್ಳಬೇಕು. ಅದಕ್ಕೆ ಕಿವಿಗೊಡದೆ ಗತ್ಯಂತರವಿಲ್ಲ. ನಮ್ಮ ವ್ಯಕ್ತಿತ್ವ ಶಕ್ತಿಯುತವಾಗಬೇಕಾದರೆ, ನಮ್ಮ ದೇಶ ಪ್ರಬಲವಾಗಬೇಕಾದರೆ ವಿವೇಕಾನಂದರ ವಿವೇಕವಾಣಿ ಎಲ್ಲರ ಕಣ್ಣುತೆರೆಸುವ ಅನಿವಾರ್ಯತೆ ಖಂಡಿತ ಇದೆ. ಹಾಗಾಗಿ ಅವರ ಕರೆಯನ್ನೇ ಕೇಳೋಣ: **"ಬನ್ನಿ ಓ ಸಿಂಹಗಳೇ, ನೀವು ಕುರಿಗಳು ಎಂಬ ಭ್ರಮೆಯನ್ನು ತೊಡೆದುಹಾಕಿ. ನೀವು ಅಮೃತಾತ್ಮರು, ನೀವು ಮುಕ್ತಾತ್ಮರು. ನೀವು ಆನಂದಸ್ವರೂಪರು ಮತ್ತು ನಿತ್ಯಾತ್ಮರು. ನೀವು ಜಡವಲ್ಲ, ನೀವು ಬರಿಯ ದೇಹವಲ್ಲ. ಜಡವು ನಿಮ್ಮ ಸೇವಕನಷ್ಟೇ ಹೊರತು, ಜಡಕ್ಕೆ ನೀವು ಸೇವಕರಲ್ಲ".**

ಹೀಗೆ ಬದುಕಿನ ಸರಳ ಸೂತ್ರವನ್ನು ಸ್ವಾಮೀಜಿ ನಮಗಿತ್ತಿದ್ದಾರೆ, ಅದೆಂದರೆ, **'ಜಡತ್ವವನ್ನು ದೂರವಾಗಿಸಿ, ಶ್ರದ್ಧೆಯನ್ನು ಶಕ್ತಿಯಾಗಿ ರೂಪಿಸಿಕೊಳ್ಳುವುದು.'** ಈ ಸೂತ್ರವು ಅಮೃತಾತ್ಮರೆನಿಸಿ, ನಿತ್ಯಾತ್ಮರೆನಿಸಿ, ಮುಕ್ತಾತ್ಮರಾಗಿ, ಆನಂದಸ್ವರೂಪರಾಗಿ ದಿವ್ಯಾನಂದವನ್ನು ಹೊಂದಲು ನಮಗೆ ಸಹಾಯ ಮಾಡುತ್ತದೆ.

# ಶಿಕ್ಷಣದ ಕುರಿತಾಗಿ ಸ್ವಾಮಿ ವಿವೇಕಾನಂದರು

ಜಿ.ಎಸ್. ಜಯದೇವ



ವಿವೇಕಕಿರಣ

ಸ್ವಾಮಿ ವಿವೇಕಾನಂದರು ಶಿಕ್ಷಣದ ಕುರಿತಾಗಿ ಅನೇಕ ಸಂದರ್ಭಗಳಲ್ಲಿ ಮಾತನಾಡಿದ್ದಾರೆ. ಶಿಕ್ಷಣದ ಮೂಲಕ ಜ್ಞಾನ ಸಂಪಾದನೆಯ ವಿಷಯ ಕುರಿತು ಮಾತನಾಡುವಾಗ 'ಜ್ಞಾನ' ಎಂಬುದು ಯಾವುದು, ಎಲ್ಲಿಂದ ಬಂತು ಎಂದು ಅವರು ವಿಶ್ಲೇಷಿಸುತ್ತಾರೆ. ಅವರ ಪ್ರಕಾರ ಮನುಷ್ಯ ಗಳಿಸಬಹುದಾದ ಜ್ಞಾನ ಅವನ ಅಂತರಂಗದಲ್ಲಿಯೇ ಇದೆ. ಬೆಣ್ಣೆ ತೆಗೆಯುವಂತೆ ಈ ಜ್ಞಾನವನ್ನು ಮನುಷ್ಯ ತನ್ನ ಮನಸ್ಸನ್ನೇ ಕಡೆದು ತೆಗೆಯುತ್ತಾನೆ. ಉದಾಹರಣೆಗೆ ನ್ಯೂಟನ್ ಕಂಡುಹಿಡಿದ ಗುರುತ್ವಾಕರ್ಷಣೆ ನಿಯಮ ಹೊರಗೆ ಎಲ್ಲೋ ಇದ್ದ ಜ್ಞಾನವಲ್ಲ. ಅದು ಅವನ ಒಳಗೇ ಇತ್ತು. ಬೀಳುವ ಸೇಬಿನ ಹಣ್ಣು ಅವನ ಮನಸ್ಸಿನಲ್ಲಿ ಈಗಾಗಲೇ ಇದ್ದ ಆಲೋಚನೆಗಳಿಗೆ ಹೊಸದಾದ ಒಂದು ಕೊಂಡಿಯನ್ನು ಸೂಚಿಸಿತು. ಹಾಗಾಗಿ ಗುರುತ್ವಾಕರ್ಷಣೆಯ ನಿಯಮವನ್ನು ಅವನು ತನ್ನ ಮನಸ್ಸಿನಿಂದಲೇ ಕಡೆದು ತೆಗೆದ.

ಸ್ವಾಮೀಜಿಯವರ ಶಿಕ್ಷಣ ಕುರಿತಾದ ಮತ್ತೊಂದು ಹೇಳಿಕೆ ಪ್ರಸಿದ್ಧವಾಗಿದೆ. ಅವರು ಹೇಳುತ್ತಾರೆ, **"ಶಿಕ್ಷಣ ಎಂಬುದು ಮನುಷ್ಯನ ಒಳಗೆ ಈಗಾಗಲೇ ಇರುವ ಪರಿಪೂರ್ಣತೆಯ ಅಭಿವ್ಯಕ್ತಿ"** ಎಂದು. ಇದರರ್ಥ ಶಿಕ್ಷಣವು ಮನುಷ್ಯನೊಳಗೆ ವ್ಯಕ್ತಿಗತ ನೆಲೆಯಲ್ಲಿ ಅಂತರ್ಗತವಾಗಿರುವ ಪರಿಪೂರ್ಣತೆಯನ್ನು ಸಮಷ್ಟಿಪ್ರಜ್ಞೆಯಲ್ಲಿ ಹೊರಗೆ ತರಲು ಸಹಾಯ ಮಾಡಬೇಕು. ಶಿಕ್ಷಣ ಮೊದಲು ಅದನ್ನು ಪಡೆದುಕೊಂಡ ವ್ಯಕ್ತಿಗೆ ಸಹಾಯ ಮಾಡಬೇಕು. ಆನಂತರ ಅದರ ಲಾಭ ಇಡೀ ಸಮಷ್ಟಿ ಬದುಕಿಗೆ ಸಲ್ಲಬೇಕು. ಆದ್ದರಿಂದ ಶಿಕ್ಷಣ ಮನುಷ್ಯನ ಶೀಲನಿರ್ಮಾಣದಲ್ಲಿ, ವ್ಯಕ್ತಿತ್ವ ನಿರ್ಮಾಣದಲ್ಲಿ ಗಂಭೀರವಾದ ಪಾತ್ರ ವಹಿಸಬೇಕು. ಆದರೆ ಇಂದಿನ ಶಿಕ್ಷಣ ಈ ಆಶಯಗಳಿಂದ ಬಹುದೂರವೇ ಇರುವುದು ನಮಗೆ ತಿಳಿದಿದೆ. ಇಂದಿನ ಶಿಕ್ಷಣ ನಮ್ಮ ನೆಲದ ವಾಸ್ತವತೆಗಳಿಂದ ದೂರವಾಗಿ ಯಾವುದೋ ಕೃತಕ ಕನಸುಗಳನ್ನು ಸಾಕಾರಗೊಳಿಸಲು ಹೆಣಗುತ್ತಿರುವಂತೆ ಕಾಣುತ್ತದೆ.

ಹೀಗೆ ಸ್ವಾಮಿ ವಿವೇಕಾನಂದರು ಶಿಕ್ಷಣದ ಕುರಿತಾಗಿ ಮಾತನಾಡುವಾಗಲೆಲ್ಲಾ ಅವರಿಗೆ ಶಿಕ್ಷಣ ಕಲಿಯುವ ಮನುಷ್ಯನೇ ಮುಖ್ಯನಾಗುತ್ತಾನೆ. ಅವನು ಕಲಿಯಬೇಕಾಗಿರುವ ವಿಷಯಗಳು ಎರಡನೆಯ ಸ್ಥಾನದಲ್ಲಿ ನಿಲ್ಲಬೇಕು ಎಂಬ ನಿಲುವಿನಿಂದಲೇ ಅವರು ಮಾತನಾಡುತ್ತಾರೆ. ಮನುಷ್ಯಪ್ರಧಾನವಾದ ಈ ಶಿಕ್ಷಣವನ್ನು 'Man-making Education' (ಮನುಷ್ಯ ನಿರ್ಮಾಣದ ಶಿಕ್ಷಣ) ಎಂದು ಅವರು ಕರೆದರು. ವ್ಯಕ್ತಿತ್ವವನ್ನು ರೂಪಿಸುವ ಈ ಶಿಕ್ಷಣ ಮಗುವಿನೊಳಗೆ ಇರುವ ಸುಪ್ತಸಾಮರ್ಥ್ಯದ ವಿಕಾಸಕ್ಕೆ ಪೂರಕವಾಗಿರಬೇಕೇ ಹೊರತು, ಶಿಕ್ಷಕನ ನಿರೀಕ್ಷೆಗಳು ಮಗುವಿಗೆ ಹೊರೆಯಾಗಬಾರದು. ಆದಕಾರಣ ಸ್ವಾಮೀಜಿ ಹೇಳುತ್ತಾರೆ, "ಒಂದು ಗಿಡಕ್ಕೆ ನೀರೆರೆದು ಬೆಳೆಸುವಂತೆ ಮಗುವಿಗೆ ಶಿಕ್ಷಣದ ನೀರೆರೆಯಬಹುದು ಅಷ್ಟೆ . ಗಿಡ ತನ್ನ ಸುಪ್ತಸಾಮರ್ಥ್ಯಕ್ಕೆ ಅನುಗುಣವಾಗಿ ಬೆಳೆಯುವಂತೆ ಮಗು ಕೂಡ ತನ್ನದೇ ಆದ ಸುಪ್ತಸಾಮರ್ಥ್ಯಕ್ಕೆ ಅನುಗುಣವಾಗಿ ಬೆಳೆಯುತ್ತದೆ." ಹೀಗಾಗಿ ಪೋಷಕರ ಮತ್ತು ವಿದ್ಯಾಸಂಸ್ಥೆಗಳ ಒತ್ತಡ ಮಗುವಿನ ಬೆಳವಣಿಗೆಗೆ ಸಹಾಯ ಮಾಡಲಾರದು. ಬದಲಾಗಿ ಮಕ್ಕಳ ಸುಪ್ತಸಾಮರ್ಥ್ಯವನ್ನು ಗುರುತಿಸಿ ಅದಕ್ಕನುಗುಣವಾಗಿ ಅವರನ್ನು ಬೆಳೆಸುವುದೇ ನಿಜವಾದ ಶಿಕ್ಷಣವಾದೀತು.

ಇಂದು ನಾವು ಮಾಹಿತಿ ನೀಡುವುದೇ ಶಿಕ್ಷಣ ಎಂದು ಭ್ರಮೆಪಡುತ್ತಿದ್ದೇವೆ. ಆದರೆ ಸ್ವಾಮೀಜಿ ಈ ಕುರಿತಾಗಿ ೧೨೦ ವರ್ಷಗಳ ಹಿಂದೆಯೇ ಎಚ್ಚರಿಕೆ ನೀಡಿದ್ದಾರೆ. ಶಿಕ್ಷಣ ಎಂಬುದು ಅರಗಿಸಿಕೊಳ್ಳಲಾಗದ ಮಾಹಿತಿಯನ್ನು ಮೆದುಳಿನಲ್ಲಿ ತುಂಬಿಕೊಳ್ಳುವುದಲ್ಲ. ಇಡೀ ಒಂದು ಗ್ರಂಥಾಲಯವನ್ನೇ ಬಾಯಿಪಾಠ ಮಾಡಿದರೂ ಪ್ರಯೋಜನವಿಲ್ಲ. ಬದುಕನ್ನು ಕಟ್ಟಿಕೊಡದ, ನಡತೆಯನ್ನು ರೂಪಿಸದ, ಕೇವಲ ಮಾಹಿತಿ ಸಂಗ್ರಹಿಸುವ ಈ ಶಿಕ್ಷಣದಿಂದ ಏನು ಪ್ರಯೋಜನ ಎಂದು ಸ್ವಾಮೀಜಿ ಕೇಳುತ್ತಾರೆ. ಇಂದು ಕಂಪ್ಯೂಟರ್ ತಂತ್ರಜ್ಞಾನ ಕೈಯಲ್ಲಿರುವುದರಿಂದ ಮಾಹಿತಿಯೇ ಸರ್ವಸ್ವ ಎಂಬ ಭ್ರಮೆಯಲ್ಲಿ ನಾವು ಮುಳುಗಿದ್ದೇವೆ. ಆದರೆ ಬರೀ ಮಾಹಿತಿಗೆ ಜೀವ ಇಲ್ಲ; ಅದು ಒಂದು ಶವಕ್ಕೆ ಸಮಾನ. ಗೋರಿಗಳಲ್ಲಿ ಹುದುಗಿಹೋಗಿರುವ ಗತಕಾಲದ ಚಲನಶೀಲತೆಯನ್ನು ಕಳೆದುಕೊಂಡ ಸ್ಥಾವರದಂತೆ ಅದು. ಈ ಸಮಾಧಿಗಳ ಮೇಲೆ ಹುಟ್ಟುವ ಒಂದೇ ಒಂದು ಹುಲ್ಲಿನ ಎಸಳು ಕೂಡ ಶ್ಮಶಾನದ ಗರ್ಭದಲ್ಲಿ ಅಡಗಿಹೋಗಿರುವ ಅಸಂಖ್ಯಾತ ಶವಗಳಿಗಿಂತ ಶ್ರೇಷ್ಠವಾದುದು. ಮಾಹಿತಿ ಎಂಬುದು ಒಂದು ಸತ್ತ, ನಿರ್ಜೀವ ಸಂಗತಿ, ನಿಂತುಹೋಗಿರುವ ಚಕ್ರ ಎಂಬ ಅರಿವು ಎಲ್ಲಿಯವರೆಗೆ ನಮಗೆ ಆಗುವುದಿಲ್ಲವೋ, ಅಲ್ಲಿಯವರೆಗೆ ವರ್ತಮಾನದ ಚಲನಶೀಲತೆಯೂ ಸಾಧ್ಯವಾಗುವುದಿಲ್ಲ, ಸೃಷ್ಟಿ ಸಾಧ್ಯವಾಗುವುದಿಲ್ಲ. ಯಾವುದನ್ನು ನಾವು ಜ್ಞಾನ ಎನ್ನುತ್ತೇವೆಯೋ, ಅದು ಮೊಳೆಯುವ ಬೀಜದಂತೆ. ಹೊಸ ವಿಸ್ತಾರದೆಡೆಗೆ